ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

50 GOLDEN JUBILEE JSS COLLEGE OF ARTS, COMMERCE & SCIENCE OOTY ROAD, MYSORE

1915 H.H. Jagadguru Dr. Sri Shivarathri Rajendra Mahaswamiji 2015 Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 1.10.2015

## ಪ್ರಕಟಣೆಯ ಕೃಪೆಗಾಗಿ

## ಜನಪದ ಗೀತೆಗಳು ಜನರ ಸಾಂಸ್ಕೃತಿಕ ಬದುಕಿನ ಪ್ರತಿರೂಪವಾಗಿರುತ್ತವೆ

ಡಾ.ಕಾ. ರಾಮೇಶ್ವರಪ್ಪ

ಮೈಸೂರು: ನಗರದ ಊಟಿರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕಾಲೇಜು ಸುವರ್ಣ ಮಹೋತ್ಸವದ ಅಂಗವಾಗಿ ರಾಜ್ಯಮಟ್ಟದ ಭಾವಗೀತೆ ಹಾಗೂ ಜನಪದ ನೃತ್ಯ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ಜಿಲ್ಲೆ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರ ಇಲಾಖೆಯ ಹಿರಿಯ ಉಪ ನಿರ್ದೇಶಕ ಡಾ. ಕಾ. ರಾಮೇಶ್ವರಪ್ಪನವರು ಉದ್ಘಾಟಿಸಿ, ಸಾಂಸ್ಕೃತಿಕ ವೈಭವವನ್ನು ಕೊಂಡಾಡಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಶೈಕ್ಷಣಿಕ ಸಾಧನೆಯನ್ನು ಸ್ಮರಿಸಿಕೊಂಡು ಬದ್ಧತೆ, ಶಿಸ್ತು, ಸೇವಾ ಮನೋಭಾವ ಇರುವಲ್ಲಿ ಯಶಸ್ಸು ಖಚಿತ ಎಂದು ಹೇಳುತ್ತಾ, ಮನುಷ್ಯನು ಏಕಾಂತದಲ್ಲಿದ್ದಾಗ ಉಂಟಾಗುವ ನೋವನ್ನು ಸಾಮೂಹಿಕ ಸಂತೋಷಕ್ಕಾಗಿ ವ್ಯಕ್ತಪಡಿಸುವಿಕೆಯೇ ಅವರ ಕಲೆ. ಭಾವನೆಗಳನ್ನು ಉದ್ದೀಪಿಸುವುದು ಭಾವಗೀತೆಯ ಕೆಲಸವಾದರೇ, ಜನಪದ ಗೀತೆಗಳು ಜನರ ಸಾಂಸ್ಕೃತಿಕ ಬದುಕಿನ ಪ್ರತಿರೂಪವಾಗಿರುತ್ತವೆ ಹಾಗೂ ತಮ್ಮ ಮೂಲ ಪರಂಪರೆಯನ್ನು ಬಿಂಬಿಸುತ್ತವೆ. ಆದುದರಿಂದ ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಗೆ ಒಳಗಾಗದೇ ತಮ್ಮ ಮೂಲ ಸಂಸ್ಕೃತಿಯನ್ನು ಮೈಗೂಡಿಕೊಳ್ಳಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಸೇಫ್ ವೀಲ್ಸ್ ಟೂರ್ಸ್ ಅಂಡ್ ಟ್ರಾವೆಲ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಿ.ಎಸ್. ಪ್ರಶಾಂತ್‌ರವರು ಜನಪದ ಮತ್ತು ಭಾವಗೀತೆಗಳನ್ನು ಹವ್ಯಾಸವಾಗಿ ಇಟ್ಟುಕೊಳ್ಳುವುದರ ಜೊತೆಗೆ ಪರಿಣಿತಿಯನ್ನು ಪಡೆದು ಒಳ್ಳೆಯ ಪ್ರತಿಭೆಗಳಾಗಿ ಹೊರಹೊಮ್ಮಬೇಕೆಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್. ಶಿವಕುಮಾರಸ್ವಾಮಿಯವರು ಮನುಷ್ಯನಲ್ಲಿರುವ ಪ್ರತಿಭೆಗಳನ್ನು ಹೊರತರಲು ಇಂತಹ ಕಾರ್ಯಕ್ರಮ ನೆರವಾಗುತ್ತವೆ. ಜನಪದ ಎಂಬುದು ಬಾಯಿಯಿಂದ ಬಾಯಿಗೆ ಹರಡಿ ಕಾಲದಿಂದ ಕಾಲಕ್ಕೆ ಉಳಿದುಕೊಂಡು ಬಂದಿರುವಂತಹ ಒಂದು ಕಲೆಯಾಗಿರುತ್ತದೆ. ಈ ಸಾಹಿತ್ಯಗಳು ಮನುಷ್ಯನಲ್ಲಿರುವಂತಹ ಚಿಂತೆಗಳನ್ನು ದೂರಮಾಡಿ ಅವರ ಮನಸ್ಸಿಗೆ ನೆಮ್ಮದಿಯನ್ನು ನೀಡುವಂತವಾಗಿರುತ್ತವೆ ಎಂದು ತಿಳಿಸಿದರು.

ದ್ವಿತೀಯ ಬಿಬಿಎಂನ ಕು.. ಪೂರ್ಣಿಮ ರವರ ಪ್ರಾರ್ಥನೆಯ ಮೂಲಕ ಆರಂಭವಾದ ಕಾರ್ಯಕ್ರಮದಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿದರೆ, ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ವಂದನಾರ್ಪಣೆ ಮಾಡಿದರು. ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಪ್ರೊ. ಪಿ.ಎಂ. ಮಹದೇವಸಾಮಿಯವರು ಕಾರ್ಯಕ್ರಮ ನಿರೂಪಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್ ಹಾಗೂ ಶೈಕ್ಷಣಿಕ ಡೀನ್ ಡಾ. ಕೆ.ವಿ. ಸುರೇಶರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಾಚಾರ್ಯರು
ಜೆ.ಎಸ್.ಎಸ್.ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570025

ಗೆ

ಸಂಪಾದಕರು

\- - - - - - - - - - - - - - -

\- - - - - - - - - - - - - - -